■ ರಘು

# ಜವರನ ಪ್ರವರ



ಈಕೆಯನ್ನು ನನ್ನ ಹಲ್ಲುಗಳಿಂದಲೇ ಎತ್ತಿ ಹಿಡಿಯುತ್ತೇನೆ!

ನವ ನಾಯಕ ಗೌತಮ್ ವರ್ಮ ಉತ್ಸಾಹದಿಂದ ಹೇಳುತ್ತಿದ್ದರೆ, ಹೊಸ ಹುಡುಗಿ ಸನಾತನಿ ಕಣ್ಣುಗಳಲ್ಲಿ ಅಚ್ಚರಿ ಹಾಗೂ ಆತಂಕ. 'ಹಾಂ, ಸನಾತನಿಯ ಸೊಂಟಕ್ಕೊಂದು ಪಟ್ಟಿ ಕಟ್ಟಿ, ಆ ಪಟ್ಟಿಯನ್ನು ಹಲ್ಲುಗಳಲ್ಲಿ ಹಿಡಿದು ಈಕೆಯನ್ನು ಮೇಲಕ್ಕೆತ್ತುವೆ' ಎಂದು ಗೌತಮ್ ಸ್ಪಷ್ಟನೆ ನೀಡಿದರು. ಅಂದಹಾಗೆ, ಗೌತಮ್ ಹಾಗೂ ಸನಾತನಿ 'ಜವರ' ಚಿತ್ರದ ನಾಯಕ–ನಾಯಕಿ. ಹಲ್ಲುಗಳಲ್ಲಿ ಬ್ಯಾಲೆನ್ಸ್ ಮಾಡುವ ಸಾಹಸ ದೃಶ್ಯ ಸಿನಿಮಾಕ್ಕೆ ಸಂಬಂಧಿಸಿದ್ದಲ್ಲ. ಅದು ಗೌತಮ್‌ರ ವೈಯಕ್ತಿಕ ಆಸೆ.

ಹಲ್ಲುಗಳನ್ನು ಮಚ್ಚಿನಂತೆ ಬಳಸಿ ತೆಂಗಿನಕಾಯಿ ಸಿಪ್ಪೆ ಸುಲಿಯುವುದೆಂದರೆ ಗೌತಮ್‌ಗೆ ನೀರು ಕುಡಿದಂತೆ. ರಾಜ್ಯದ ವಿವಿಧ ಭಾಗಗಳಲ್ಲಿ ಮಾತ್ರವಲ್ಲ, ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದ ಕಾರ್ಯಕ್ರಮಗಳಲ್ಲೂ ತಮ್ಮ ಹಲ್ಲುಗಳ ತಾಕತ್ತನ್ನವರು ತೋರಿಸಿದ್ದಾರೆ. ಈವರೆಗಿನ ಸುಮಾರು ನಾಲ್ಕುನೂರು ಕಾರ್ಯಕ್ರಮಗಳಲ್ಲಿ ಎರಡು ಸಾವಿರಕ್ಕೂ ಹೆಚ್ಚಿನ ತೆಂಗಿನಕಾಯಿಗಳ ಸಿಪ್ಪೆಯನ್ನು ಹಲ್ಲುಗಳಿಂದಲೇ ಬಿಡಿಸಿದ ದಾಖಲೆ ಅವರದು.

ನಾಯಕನ ಸಾಹಸಿ ವ್ಯಕ್ತಿತ್ವಕ್ಕೆ ಹೊಂದುವಂತಹ ಪಾತ್ರವೇ 'ಜವರ' ಚಿತ್ರದಲ್ಲಿದೆಯಂತೆ. ಜವರಾಯನನ್ನು ಸೂಚಿಸುವ 'ಜವರ' ಹೆಸರಿನ ಚಿತ್ರದ ಮೂಲಕ ಸಾವಿನ ವಿವಿಧ ಆಯಾಮಗಳನ್ನು ವಿಶ್ಲೇಷಿಸುವ ಪ್ರಯತ್ನದಲ್ಲಿದ್ದಾರೆ ನಿರ್ದೇಶಕ ಆರ್.ಮನು. ಚೊಚ್ಚಲ ನಿರ್ದೇಶನದ ಖುಷಿಯಲ್ಲಿರುವ ಅವರು, ನಾಗತಿಹಳ್ಳಿ ಚಂದ್ರಶೇಖರ್ ಹಾಗೂ ಶಿವಮಣಿ ಗರಡಿಯಲ್ಲಿ ಪಳಗಿದ ಅನುಭವಿ. ಎ.ಟಿ.ರವೀಶ್ ಸಂಗೀತ ಹಾಗೂ ಸಿದ್ಧರಾಜು ಛಾಯಾಗ್ರಹಣ ಇರುವ 'ಜವರ' ಚಿತ್ರದ ಮುಹೂರ್ತ ಈಚೆಗಷ್ಟೇ ಬೆಂಗಳೂರಿನಲ್ಲಿ ನೆರವೇರಿದೆ.

## ಕೃಷ್ಣನ ಹೊಸ ವೇಷ

ಪ್ರತಿಭಾವಂತ ನಟ ನವೀನ್‌ಕೃಷ್ಣರ ಪ್ರತಿಭಾ ಪ್ರದರ್ಶನಕ್ಕೊಂದು ವೇದಿಕೆ ಲಭ್ಯವಾಗಿದೆ. ಕೃಷ್ಣ ಈಗ 'ಶಂಕ್ರ'!

'ಶಂಕ್ರ' ತಮ್ಮ ಚಿತ್ರಜೀವನದ ಹೊಸ ಮಜಲು ಎನ್ನುವುದು ನವೀನ್‌ಕೃಷ್ಣರ ಅನಿಸಿಕೆ. ಈಚೆಗೆ, ಸಿನಿಮಾದ ಬಗೆಗಿನ ವಿವರಗಳನ್ನು ನೀಡಲು ಕರೆದ ಸುದ್ದಿಗೋಷ್ಠಿಯಲ್ಲವರು ತಮ್ಮ ಪಾತ್ರದ ವಿಶೇಷಗಳನ್ನು ಉತ್ಸಾಹದಿಂದ ವಿವರಿಸಿದರು. ವಿವರಣೆ ಮಾತ್ರವಲ್ಲ, ಗುಟ್ಕಾ ಪಾಕೀಟುಗಳ ಮಾಲೆ ಹಾಕಿಕೊಂಡು, ಮುಖಕ್ಕೆ ರಂಗು ಬಳಿದುಕೊಂಡು, ತಮಟೆಯ ಮೇಲೆ ಕೈಯಾಡಿಸುತ್ತ ಯದ್ವಾತದ್ವಾ ಕುಣಿದರು. 'ನನಗೆ ನಾನೇ ದೇವ್ರು. ನಾನು ನಂಬಿರೋದು ಬೆವರು' ಎನ್ನುವ ಡೈಲಾಗ್ ಹೊಡೆದರು. ಸಮಾಜದ ಕೊಳಕನ್ನು ತೊಳೆಯುವ ಕಥೆಯುಳ್ಳ ಈ ಚಿತ್ರದಲ್ಲವರದು ಭಿಕ್ಷುಕನ ಪಾತ್ರ. ಅದಕ್ಕಾಗಿ ಕೆಂಗೇರಿ ಮೋರಿಯಲ್ಲಿ ಮುಳುಗೇಳಲೂ ನವೀನ್‌ಕೃಷ್ಣ ಸಿದ್ಧರಾಗಿದ್ದಾರಂತೆ. ಸುಮಾರು ಇಪ್ಪತ್ತು ದಿನಗಳ ಚಿತ್ರೀಕರಣ ಮೋರಿ ಬಳಿಯೇ ನಡೆಸಲು ನಿರ್ದೇಶಕರು ಉದ್ದೇಶಿಸಿದ್ದಾರೆ.

'ಶಂಕ್ರ'ನ ಚಿತ್ರಕಥೆಗಾಗಿ ಯುವ ನಿರ್ದೇಶಕ ಮಾಲತೇಶ್ ವರ್ಷಗಟ್ಟಲೆ ಶ್ರಮ ಹಾಕಿದ್ದಾರೆ. ಚಿತ್ರಕಥೆಯ ಎರಡು ಕರಡು ಸಂಪುಟಗಳನ್ನು ಎದುರಿಗಿಟ್ಟುಕೊಂಡೇ ಮಾತನಾಡಿದ ಅವರು, ಇನ್ನೂರು ದೃಶ್ಯಗಳನ್ನು ಚಿತ್ರಕ್ಕಾಗಿ ಯೋಜಿಸಿದ್ದಾರಂತೆ. ಬದುಕಿನ ಮೌಲ್ಯಗಳ ಶೋಧನೆಯುಳ್ಳ ಅವರ ಸಿನಿಮಾದ ನಿರೂಪಣೆ ಜೆಟ್ ವೇಗದಲ್ಲಿರುತ್ತದಂತೆ. ತಿರುಮಲರಾವ್ ಛಾಯಾಗ್ರಹಣವಿರುವ ಈ ಚಿತ್ರಕ್ಕೆ ರಾಜ್ ಅವರ ಸಂಗೀತವಿದೆ. ತಾರಾಗಣದಲ್ಲಿ ಹರೀಶ್‌ರಾಜ್, ಯತಿರಾಜ್, ದೇವರಾಜ್, ಶರತ್ ಲೋಹಿತಾಶ್ವ, ರಂಗಾಯಣ ರಘು, ಪದ್ಮಜಾ ರಾವ್ ಮುಂತಾದವರು ಇದ್ದಾರೆ.



## ಮಂಜು ಕರಗಿದಾಗ...



ಕನ್ನಡ ಚಿತ್ರರಂಗದ ದೆಸೆ ಹೊರಳಿದಂತಿದೆ. 'ಪಂಚರಂಗಿ' ಬೆನ್ನಿಗೆ ಪುನೀತ್‌ರ 'ಜಾಕಿ' ಜಾಕ್‌ಪಾಟ್ ಹೊಡೆದಿದೆ. ಪುನೀತ್ ಚಿತ್ರ ಗೆಲ್ಲುವುದರಲ್ಲಿ ವಿಶೇಷವೇನಿಲ್ಲ. ಅಚ್ಚರಿ ಇರುವುದು 'ಕಿಚ್ಚ ಹುಚ್ಚ' ಚಿತ್ರದ ನಿರೀಕ್ಷೆಗೆ ಮೀರಿದ ಗೆಲುವಿನಲ್ಲಿ. ಸುದೀಪ್ ನಾಯಕರಾಗಿರುವ 'ಕಿಚ್ಚ ಹುಚ್ಚ' ಪ್ರೇಕ್ಷಕರಿಗೆ ಇಷ್ಟವಾಗಿದ್ದು, ನಿರ್ಮಾಪಕ ಕೆ.ಮಂಜು ಅವರ ಮುಖದಲ್ಲಿ ನಗೆಯರಳಿಸಿದೆ.

ಈಚಿನ ದಿನಗಳಲ್ಲಿ ಒಳ್ಳೆಯ ಸಿನಿಮಾಗಳನ್ನು ನಿರ್ಮಿಸಿಯೂ ಸೋಲು ಕಂಡವರು ಮಂಜು. ಹಳೆಯ ಸೋಲುಗಳ ಬಾಕಿ ಚುಕ್ತಾಗೊಳಿಸುವಂತೆ 'ಕಿಚ್ಚ ಹುಚ್ಚ' ಗೆದ್ದಿರುವುದು ಸಹಜವಾಗಿಯೇ ಅವರಿಗೆ ಸಂತಸ ತಂದಿದೆ. ತಮ್ಮ ಚಿತ್ರದ ಬಿಡುಗಡೆ ಸಂದರ್ಭದಲ್ಲೇ ತೆರೆಕಾಣಬೇಕಿದ್ದ ಸುದೀಪ್ ಅಭಿನಯದ ಮತ್ತೊಂದು ಚಿತ್ರ 'ವೀರ ಪರಂಪರೆ' (ನಿರ್ದೇಶನ: ಎಸ್.ನಾರಾಯಣ್) ಎರಡು ವಾರ ತಡವಾದದ್ದು ಕೂಡ ಮಂಜು ಅವರಿಗೆ ವರವಾಗಿ ಪರಿಣಮಿಸಿದೆ.